## ಕದಂಬರ ಕಾಲದ ಆಲ

ಈ ಚಿತ್ರದಲ್ಲಿ ಕಾಣುತ್ತಿರುವ ಆಲದ ಮರ ಕದಂಬರ ಕಾಲದ್ದು ಎನ್ನಲಾಗುತ್ತಿದೆ. ಸರಿ ಸುಮಾರು ಅದರ ವಯಸ್ಸು 16 ಶತಮಾನಗಳಷ್ಟು ಹಳೆಯದು. ಇದು ಶಿರಸಿ – ಬನವಾಸಿಗೆ ಹೋಗುವ ಹಾದಿಯಲ್ಲಿ ಇದೆ. ಇಂತಹ ಹಲವಾರು ಆಲದ ಮರಗಳನ್ನು ಆ ಮಾರ್ಗದಲ್ಲಿ ನೋಡಬಹುದು. ಬನವಾಸಿಯು ಕದಂಬರ ರಾಜಧಾನಿಯಾಗಿತ್ತು. ಆಗಿನ ಕಾಲದ ಕದಂಬರು ಯಾತ್ರಿಕರ ಅನುಕೂಲಕ್ಕಾಗಿ ಆಲದ ಮರಗಳನ್ನು ನೆಡಿಸಿದ್ದರು ಎಂದು ಇತಿಹಾಸ ಹೇಳುತ್ತದೆ.

–ಸಂಜ್ಞಾ ಪಿ ಭಟ್ಟ, ಶಿರಸಿ









## ನಾಮದ ಚಿಲುಮೆಗೆ ರಾಮನ ನಂಟು...

ತುಮಕೂರಿನ ಸಮೀಪದಲ್ಲಿರುವ ದೇವರಾಯನ ದುರ್ಗದ ನಾಮದ ಚಿಲುಮೆಗೆ ಶ್ರೀರಾಮನ ನಂಟಿದೆ. ರಾಮ ವನವಾಸದ ಸಮಯದಲ್ಲಿ ಸೀತೆ ಹಾಗೂ ಸೋದರ ಲಕ್ಷ್ಮಣನೊಂದಿಗೆ ಇಲ್ಲಿ ತಂಗಿದ್ದ. ಒಮ್ಮೆ ತಿಲಕವಿಡುವ ಸಂದರ್ಭದಲ್ಲಿ ನೀರು ಸಿಗದಾಯಿತು, ಆಗ ರಾಮ ಬಾಣವನ್ನು ಕಲ್ಲುಬಂಡೆಗೆ ಹೊಡೆದಾಗ ಬಾಣದ ಶಕ್ತಿಯಿಂದ ನೀರು ಬಂಡೆಯಿಂದ ಚಿಮ್ಮಿ ಹರಿಯತೊಡಗಿತು. ಆ ನೀರಿನಿಂದಲೇ ಶ್ರೀರಾಮ ಹಣೆಗೆ ತಿಲಕ(ನಾಮ) ಇಟ್ಟುಕೊಂಡದ್ದರಿಂದ ಸ್ಥಳಕ್ಕೆ 'ನಾಮದ ಚಿಲುಮೆ' ಹೆಸರು ಬಂದಿದೆಯೆಂದು ಸ್ಥಳ ಪುರಾಣ ಕಥೆ ಇದೆ.

ಅದರ ಸನಿಹದಲ್ಲೇ ಜಿಂಕೆ ವನವಿದ್ದು ಕೌಟುಂಬಿಕ ಪ್ರವಾಸಕ್ಕೆ ಸೂಕ್ತವಾಗಿದೆ.

–ಪ್ರಿಯಾಂಕಾ ಎರೇಸೀಮಿ, ಹಾವೇರಿ

## ವಿಭೂತಿ ಪೆಟ್ಟಿಗೆಗೆ ಶತಮಾನ

ನವಿಲಿನ ಆಕಾರದ ಈ ವಿಭೂತಿ ಪೆಟ್ಟಿಗೆ ಸಮಾರು ಮೂರು ನೂರು ವರ್ಷಕ್ಕಿಂತ ಹಿಂದಿನದು. ಈಗ ಬಳಸದಿದ್ದರೂ ತನ್ನ ಆಕಾರದಿಂದ ಆಕರ್ಷಣೆಯನ್ನು ಉಳಿಸಿಕೊಂಡಿದೆ. ಶಿರಸಿಯ ಹುಲೇಕಲ್‌ನ ಚಿದಾನಂದ ಶೀಲವಂತ ಎಂಬವರ ಮನೆಯಲ್ಲಿದೆ.

ಮರಕೆತ್ತನೆಯ ಕೌಶಲ್ಯಕ್ಕೆ ಮಾದರಿ ಎಂಬಂತಿದೆ. ಮೇಲ್ನೋಟಕ್ಕೆ ನವಿಲು, ರೆಕ್ಕೆಗಳನ್ನು ಎರಡೂ ಕಡೆ ತೆರೆದಾಗಷ್ಟೇ ಒಳಗಿರುವ ವಿಭೂತಿ ತಟ್ಟೆ ಗೋಚರಿಸುವಂತೆ ಬಡಗಿಯು ತನ್ನ ಕರಕುಶಲತೆ ತೋರಿಸಿದ್ದಾನೆ.

–ಜಿ.ಎಂ. ಬೊಮ್ನಳ್ಳಿ, ಶಿರಸಿ

